**ಕರ್ನಾಟಕ ಲೋಕಸೇವಾ ಆಯೋಗ**

**"ಉದ್ಯೋಗ ಸೌಧ" ಬೆಂಗಳೂರು-560 001.**

ಸಂಖ್ಯೆ: ಪಿಎಸ್ ಸಿ/ 03 /ಇ(1) /2024-25 ದಿನಾಂಕ:02-04-2024

**ತಿದ್ದುಪಡಿ ಅಧಿಸೂಚನೆ**

ಆಯೋಗವು 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಒಟ್ಟು 384 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ:ಪಿಎಸ್ ಸಿ 509/ಇ(1)/2023-24, ದಿನಾಂಕ:26-02-2024ರಲ್ಲಿ ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯಲ್ಲಿನ ಗ್ರೂಪ್-ಎ ವೃಂದದ ಆರ್.ಪಿ.ಸಿ. ಮತ್ತು ಹೈ.ಕ. ವೃಂದದ ಹುದ್ದೆಗಳ ಒಟ್ಟು ಸಂಖ್ಯೆ 123 (ಆರ್.ಪಿ.ಸಿ.) ಮತ್ತು 36 (ಹೈ.ಕ.) ಎಂದೂ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಒಟ್ಟಾರೆ ಹುದ್ದೆಗಳ ಸಂಖ್ಯೆ 307 (ಆರ್.ಪಿ.ಸಿ.) ಮತ್ತು 77 (ಹೈ.ಕ.) ಎಂದು ನಮೂದಾಗಿದ್ದು, ಅವುಗಳನ್ನು ಒಟ್ಟು ಸಂಖ್ಯೆ 126 (ಆರ್.ಪಿ.ಸಿ.) ಮತ್ತು 33(ಹೈ.ಕ.) ಎಂದೂ ಹಾಗೂ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಒಟ್ಟಾರೆ ಹುದ್ದೆಗಳ ಸಂಖ್ಯೆ 310 (ಆರ್.ಪಿ.ಸಿ.) ಮತ್ತು 74 (ಹೈ.ಕ.) ಎಂದೂ ಓದಿಕೊಳ್ಳತಕ್ಕದ್ದು.

ಸದರಿ ಅಧಿಸೂಚನೆಯಲ್ಲಿನ ಅನುಬಂಧ-1ರಲ್ಲಿನ ವಾಣಿಜ್ಯ ತೆರಿಗೆ ಅಧಿಕಾರಿ (ವಾಣಿಜ್ಯ ತೆರಿಗೆ ಇಲಾಖೆ) ಗ್ರೂಪ್-ಬಿ ವೃಂದದ ಆರ್.ಪಿ.ಸಿ. ಮತ್ತು ಹೈ.ಕ. ವೃಂದದ ವರ್ಗೀಕರಣದಲ್ಲಿ ಆಂಗ್ಲಭಾಷೆಯಲ್ಲಿ COMMERCIAL TAX INSPECTOR (COMMERCIAL TAX DEPARTMENT) GROUP-B ಎಂದು ನಮೂದಾಗಿದ್ದು, ಅದನ್ನು COMMERCIAL TAX OFFICER (COMMERCIAL TAX DEPARTMENT) GROUP-B ಎಂದು ಓದಿಕೊಳ್ಳತಕ್ಕದ್ದು.

ಸದರಿ ನೇಮಕಾತಿಗೆ ಅರ್ಜಿ ಸಲ್ಲಿಸಲು ದಿನಾಂಕ:04-03-2024 ರಿಂದ 03-04-2024ರವರೆಗೆ ಅವಕಾಶ ಕಲ್ಪಿಸಲಾಗಿದ್ದು, ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ:05-05-2024ರಂದು ನಡೆಸಲು ನಿಗದಿಪಡಿಸಲಾಗಿತ್ತು. ಪ್ರಸ್ತುತ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಹಾಗೂ ಚುನಾವಣಾ ಕಾರ್ಯ ಪ್ರಗತಿಯಲ್ಲಿರುವ ಕಾರಣದಿಂದಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 15-04-2024ರವರೆಗೆ ಮುಂದೂಡಲಾಗಿರುತ್ತದೆ ಹಾಗೂ ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ:07-07-2024ರಂದು ನಡೆಸಲು ಮರುನಿಗದಿಪಡಿಸಲಾಗಿರುತ್ತದೆ.

**ಸಹಿ/-**

**(ಡಾ.ರಾಕೇಶ್ ಕುಮಾರ್ ಕೆ.)**

ಕಾರ್ಯದರ್ಶಿ,

ಕರ್ನಾಟಕ ಲೋಕಸೇವಾ ಆಯೋಗ.